ಅಸಲು ದಾವಾ ಸಂಖ್ಯೆ: 603/2020

**ಡಿ.ಡಬ್ಲ್ಯೂ-1**

**ದಿಃ 06-04-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ KVM ವಕೀಲರಿಂದ**

1ನೇ ಪ್ರತಿವಾದಿ ನನ್ನ ತಂದೆ. ಮೃತ 2ನೇ ಪ್ರತಿವಾದಿ ನನ್ನ ದೊಡ್ಡಪ್ಪ. 2ನೇ ಪ್ರತಿವಾದಿಯು ದಿಃ10.05.2020 ರಂದು ತೀರಿಕೊಂಡಿರುತ್ತಾರೆ. 3 ರಿಂದ 7ನೇ ಪ್ರತಿವಾದಿಯರು ಮೃತ 2ನೇ ಪ್ರತಿವಾದಿಯ ವಾರಸುದಾರರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಮೃತ 2ನೇ ಪ್ರತಿವಾದಿಗೆ ಕಲಗೌಡ ಗೌಡಪ್ಪ ಪಾಟೀಲ ಎನ್ನುವ ಇನ್ನೊಬ್ಬ ಮಗ ಇರುತ್ತಾರೆ ಎಂದು ನುಡಿಯುತ್ತಾರೆ. 8ನೇ ಪ್ರತಿವಾದಿ ನನ್ನ ಅಣ್ಣ. ನಾನು ಎಲ್ಲ ಪ್ರತಿವಾದಿಯರ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ.

2. ವಾದಿಯು ನಮ್ಮ ವಿರುದ್ಧ ಯಾವ ಸರ್ವೆ ನಂಬರಿಗೆ ಸಂಬಂಧಿಸಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಬಿ.ಕೆ. ಬಾಳೇಕುಂದ್ರಿ ಗ್ರಾಮದ ಸರ್ವೆ ನಂ.121/10 ಎಂದು ನುಡಿಯುತ್ತಾರೆ. ಸದರಿ ಜಾಗೆಯ ಒಟ್ಟು ವಿಸ್ತೀರ್ಣ 21ಗುಂಟೆ ಇರುತ್ತದೆ. ಸದರಿ 21 ಗುಂಟೆಯೊಳಗಡೆ 3ಗುಂಟೆ ಜಮೀನು ಪೋಟ ಖರಾಬು ಆಗಿರುತ್ತದೆ. ಆ ರೀತಿಯಾಗಿ 18 ಗುಂಟೆ ಜಮೀನು ಉಳಿಯುತ್ತದೆ ಎಂದರೆ ಸರಿ. ನಾನು ಸದರಿ ಜಮೀನಿನಲ್ಲಿ 10ಗುಂಟೆ 01 ಅಣೆ ಜಮೀನನ್ನು ಶ್ರೀ ಮುಕ್ತುಬಸಾಬ್ ಡಿ. ಜಮಾದಾರ ಹಾಗೂ ಕಾಶೀಮಸಾಬ್ ಎಮ್ ಜಮಾದಾರ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ 10 ಗುಂಟೆ 01 ಅಣೆ ಜಮೀನು ಮಾರಿದ ನಂತರ ನನಗೆ 7ಗುಂಟೆ 15 ಅಣೆ ಜಮೀನು ಉಳಿಯುತ್ತದೆ ಎಂದರೆ ಸರಿ. ಸದರಿ 07ಗುಂಟೆ 15 ಅಣೆ ಜಮೀನಿನ ಉತ್ತರಕ್ಕೆ ಶ್ರೀ ಮುಕ್ತುಬಸಾಬ್ ಡಿ. ಜಮಾದಾರ ಹಾಗೂ ಕಾಶೀಮಸಾಬ್ ಎಮ್ ಜಮಾದಾರ ರವರ ಜಮೀನು ಇರುತ್ತದೆ ಎಂದರೆ ಸರಿ. ಸದರಿ 07ಗುಂಟೆ 15 ಅಣೆ ಜಮೀನಿನ ದಕ್ಷಿಣಕ್ಕೆ ಶಂಕರ ಬಿ. ಚೋಬಾರಿ ರವರ ಜಮೀನ ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು

ಅರ್ಜದ ಅಕ್ಷದ ಮೊಹಮದ್ ಶರೀಫ್ ಮೋಮಿನ ರವರ ಹಾಗೂ ಸದರಿಯವರ ಅಣ್ಣ–ತಮ್ಮಂದಿರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. 07ಗುಂಟೆ 15 ಅಣೆ ಜಮೀನಿನ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ.

3. 2018 ನೇ ಇಸ್ವಿಯಲ್ಲಿ ನಿಪಿಃ16 ರಂತೆ ನಾವು 1ನೇ ಪ್ರತಿವಾದಿ, ಮೃತ 2ನೇ ಪ್ರತಿವಾದಿ, 3ನೇ ಪ್ರತಿವಾದಿ ಹಾಗೂ ನನ್ನ ತಾಯಿ ಅಣ್ಣವ್ವ ರವರ ವಿರುದ್ಧ ಅಸಲು ದಾವಾ ಸಂಖ್ಯೆ 781/2018 ನ್ನು ವಿಭಾಗ ಕೋರಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಪಿಃ16 ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ಒಪ್ಪಿರುತ್ತಾರೆ. ಸದರಿ ನಿಪಿಃ16 ರಲ್ಲಿ ಮೇಲೆ ಹೇಳಿದ 7ಗುಂಟೆ 15ಅಣೆ ಜಮೀನಿನ ದಕ್ಷಿಣಕ್ಕೆ ಯಾರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಶಂಕರ ಚೋಬಾರಿ ರವರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. 7ಗುಂಟೆ 15ಅಣೆ ಜಮೀನು ಆರ್.ಎಸ್. ನಂ.121/12 ರಲ್ಲಿ ಪ್ರತಿವಾದಿಯರ ಹೆಸರಿಗೆ ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಸದರಿ ಆಸ್ತಿಯ ಪಹಣಿ ಪತ್ರಿಕೆ ಹಾಗೂ ಪಿಟಿ ಶೀಟನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ ಹಾಗೂ ಸದರಿ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸಾಕ್ಷಿಗೆ ನಿಪಿಃ19 ದಾಖಲೆಯನ್ನು ತೋರಿಸಿದ್ದು, ಅದು ದಾವಾ ಸ್ವತ್ತಿನ ಜಂಟಿ ಪಿಟಿ ಶೀಟ್ ಆಗಿರುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ನಿಪಿಃ18 ದಾವಾ ಸ್ವತ್ತಿನ ಒಂದು ಪಿಟಿ ಶೀಟ್ ಆಗಿರುತ್ತದೆ ಎಂದರೆ ಸರಿ. ಸದರಿ ನಿಪಿಃ18 ಹಾಗೂ 19 ಪಿಟಿ ಶೀಟ್ ಗಳನ್ನು ಸಂಬಂಧಪಟ್ಟ ಅಧಿಕಾರಿಗಳು ನೀಡಿದ್ದು, ಅವುಗಳು ಸರಿಯಾಗಿರುತ್ತವೆ ಎಂದರೆ ಸರಿ.

**ಅಸಲು ದಾವಾ ಸಂಖ್ಯೆ: 603/2020**

**ಡಿ.ಡಬ್ಲ್ಯೂ-1**

4. ನಿಪಿ:35 ರಂತೆ ದಿ:24.06.2003 ರಂದು ದಾವಾ ಸ್ವತ್ತು 1ನೇ ಪ್ರತಿವಾದಿ ಹಾಗೂ ಮೃತ 2ನೇ ಪ್ರತಿವಾದಿಯ ಮಾಲೀಕತ್ವದಲ್ಲಿ ಎಂದರೆ ಸರಿ. ಈಗ ನನಗೆ 47 ವರ್ಷ. 2003 ರಲ್ಲಿ ನಾನು ಸೇನೆಯಲ್ಲಿದ್ದೆ. ದಾವಾ ಸ್ವತ್ತನ್ನು 2003 ನೇ ಇಸ್ವಿಯಲ್ಲಿ 1ನೇ ಪ್ರತಿವಾದಿ ಹಾಗೂ ಮೃತ 2ನೇ ಪ್ರತಿವಾದಿಯರಷ್ಟೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ರಜೆಯಲ್ಲಿ ನಾನು ಹಾಗೂ ಬೇರೆ ದಿನಗಳಲ್ಲಿ ನಮ್ಮ ಕುಟುಂಬದವರು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**